





# ಧಕ್.. ಧಕ್.. ಕರ್‌ನೇ ಲಗಾ..!

## ಅವಳು ಎದುರಿಗೆ ಬಂದರೆ ಹೃದಯ ಕುಣಿದಿದೆ ದೇವರೆ..

ಅಡಿಯಿಟ್ಟಿದೆ ವಸಂತ. ತಂಗಾಳಿಗೆ ತೂಗುತ್ತಿರುವ ಸುಗಂಧ ಪುಷ್ಪಗಳ ಋತುಗಾನ. ಅಲ್ಲಿ ಮರದ ಕೆಳಗೆ ಅವಳು ಕಾಯುತ್ತಾ ಕುಳಿತಿದ್ದಾಳೆ. ಹುಡುಗ ಅವಳತ್ತ ಹೆಜ್ಜೆ ಹಾಕುತ್ತಿದ್ದಾನೆ. ಆದರೆ ಗಟ್ಟಿ ಗುಂಡಿಗೆಯಲ್ಲಿ ಸುತ್ತಿಗೆಯಿಂದ ಬಾರಿಸಿದಂತೆ ಡವ ಡವ. ಇಲ್ಲ, ಧೈರ್ಯ ತಂದುಕೊಳ್ಳಬೇಕು. ಧೈರ್ಯದಿಂದ ಮರದ ಕೆಳಗೆ ನಿಂತ ಪ್ರೀತಿಯ ಹುಡುಗಿಯನ್ನು ಸಮೀಪಿಸಿದ ಯುವಕನ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತೆ ಜೋರು ಸದ್ದು. ನಡುಗುವ ಕೈಗಳಿಂದ ಹೃದಯವನ್ನು ಒತ್ತಿ ಹಿಡಿದರೂ ಲಯಬದ್ಧವಾದ ಲಬ್..ಡಬ್! ಹುಡುಗಿಯದ್ದೂ ಅದೇ  ಸ್ಥಿತಿ!

ಅದು ಮೊದಲ ಪ್ರೇಮದ ಮೊದಲ ತಲ್ಲಣ. ದಿಲ್ ಧಕ್ ಧಕ್ ಕರ್‌ನೇ ಲಗಾ..!

ಈ ಹುಡುಗರೇ ಹಾಗೆ. ಚಿಗುರು ಮೀಸೆ ಮೂಡುವ ಮುನ್ನವೇ ಹುಡುಗಿಯರ ಆಳವಾದ ಗುಳಿ ಕೆನ್ನೆಯೊಳಗೆ ಬಿದ್ದು ಬಿಡುತ್ತಾರೆ. ಆದರೆ ಪ್ರೇಮ ನಿವೇದನೆಯದ್ದೇ ತೊಂದರೆ. ಅವಳಿಗೆ ವಿಷಯ ತಿಳಿಸಬೇಕು. ಅದನ್ನು ಹೇಳಹೊರಟರೆ ಹಾಳಾದ ಹೃದಯ ಡವ ಡವ ಎಂದು ಜೋರಾಗಿ ಹೊಡೆದುಕೊಳ್ಳುತ್ತದೆ. ಹೌದು, ಪ್ರೇಮ ನಿವೇದನೆ ಮಾಡ ಹೊರಟ ಹುಡುಗನ ಹೃದಯ ಅದೇಕೆ ಡವ ಡವ ಎಂದು ಹೊಡೆದುಕೊಳ್ಳುತ್ತದೆ? ಹೃದಯದ ಬಡಿತ ಹೀಗೆ ಜೋರಾಗಲು ಅಡ್ರೆನಲೀನ್ ಎಂಬ ಹಾರ್ಮೋನೇ ಕಾರಣ. ಜೊತೆಗೆ ತಿದಿ ಒತ್ತಿದಂತೆ ಜೋರು ಉಸಿರಾಟ.

ಮನದನ್ನೆಯ ಕಾರಿರುಳಿನಂಥ ಕುರುಳನ್ನು ತೊಳೆದ ಶಾಂಪೂವಿನ ಪರಿಮಳಕ್ಕೆ ಅರಳಬೇಕಾದ ನಾಸಿಕದ ಹೊರಳೆಗಳು ಆಮ್ಲಜನಕಕ್ಕಾಗಿ ಬೇಡುವ ಸ್ಥಿತಿ. ಆದರೆ ಒತ್ತಡದಿಂದ ಬಳಲಿದ ಹುಡುಗನ ಸ್ನಾಯುಗಳಿಗೆ ಹೆಚ್ಚುವರಿ ಶಕ್ತಿ ಕೊಡಲು ಪ್ರಾಣವಾಯು ಆಮ್ಲಜನಕ ಬೇಕಲ್ಲ? ಇದೇ ಅಡ್ರೆನಲೀನ್ ಜೀರ್ಣಾಂಗ ವ್ಯವಸ್ಥೆಯ ರಕ್ತವನ್ನೆಲ್ಲ ಸ್ನಾಯುಗಳಿಗೆ ಅಟ್ಟಿ ಬಿಡುತ್ತದೆ. ಅದಕ್ಕೇ ಯುವತಿಯನ್ನು ಸಮೀಪಿಸುವ ಯುವಕನ ಹೊಟ್ಟೆಯೊಳಗೆ ಕಚಗುಳಿ ಇಟ್ಟಂಥ ಅನುಭವ.

ಪ್ರೇಮದ ಹೊಂಡದೊಳಗೆ ಬಿದ್ದವನಿಗೆ ಪತರಗುಟ್ಟಿಸುವ ನರ್ವಸ್. ಆ ನರ್ವಸ್ ಬಡಿದೆಬ್ಬಿಸುವ ಅಡ್ರೆನಲೀನ್ ಸಂಗ್ರಹ ಹುಚ್ಚು ಹೊಳೆಯಂತೆ ನುಗ್ಗುತ್ತದೆ.

ಪ್ರೇಮ ನಿವೇದನೆ ಮಾಡುವಾಗ ಮಾತ್ರ ಹೀಗೆ ಎದೆ ಡವ ಡವ ಎಂದು ಹೊಡೆದುಕೊಳ್ಳುವುದಲ್ಲ. ದೇಹ ಹುರಿಗಟ್ಟಿಸಲು ಮಾಡುವ ವ್ಯಾಯಾಮ ಮತ್ತು ಹಾಸಿಗೆಗೆ ಅಂಟಿ ಕೊಳ್ಳುವಂತೆ ಮಾಡುವ ಜ್ವರವೂ  ಹೃದಯದ ತಾಳ ತಪ್ಪಿಸಿ ಬಿಡುತ್ತದೆ. ಸಾಮಾನ್ಯವಾಗಿ ಆರೋಗ್ಯಕರ ಹೃದಯ ನಿಮಿಷಕ್ಕೆ 60–100 ಬಾರಿ ಬಡಿದುಕೊಳ್ಳುತ್ತದೆ. ಆದರೆ ಪ್ರೇಮಜ್ವರ, ಜ್ವರ ಮತ್ತು ವ್ಯಾಯಾಮದ  ಸಂದರ್ಭದಲ್ಲಿ ಬಡಿತ ನೂರರ ಗಡಿ ದಾಟುತ್ತದೆ.

ಆದರೆ ಇದರಿಂದ ಏನೂ ತೊಂದರೆ ಇಲ್ಲ  ಬಿಡಿ. ಹಾಗೆ ಬಂದು ಹೀಗೆ ಬೀಸಿ ಹೋಗುವ ಬಿರುಗಾಳಿಯಂತೆ ಇದು ಸಾಮಾನ್ಯ. ಆದರೆ ಕಾರಣವಿಲ್ಲದೇ ನಿಮಿಷಕ್ಕೆ 400ಕ್ಕೂ ಅಧಿಕವಾಗುವ ಇಂಥ ಎದೆ ಬಡಿತ ಮಾತ್ರ ಅಪಾಯಕಾರಿ. ಅದಕ್ಕೆ ವೈದ್ಯರು ಟೆಕಿಕಾರ್ಡಿಯ ಎಂದು ಹೆಸರಿಟ್ಟಿದ್ದಾರೆ. (ಟೆಕಿ– ವೇಗ, ಕಾರ್ಡಿಯ– ಹೃದಯ).

ಹೃತ್ಕುಕ್ಷಿಯಲ್ಲಿ ಹುಟ್ಟುವ ಈ ಬಡಿತ ಬಿಸಿ ರಕ್ತವನ್ನು ತಣ್ಣಗೆ ಮಾಡುವಷ್ಟು ನಿರ್ದಯಿ. ಹೃತ್ಕುಕ್ಷಿಯ ಸ್ನಾಯುಗಳು ಆಕುಂಚನಗೊಳ್ಳದೆ ಮೆದುಳಿಗೆ, ಪ್ರಮುಖ ಅಂಗಗಳಿಗೆ ರಕ್ತ ಸಂಚಾರವನ್ನೇ ನಿಲ್ಲಿಸಿಬಿಡುತ್ತವೆ.

ಪ್ರೇಮದ ಪುಳಕ ಎಬ್ಬಿಸುವ ಹೃದಯವನ್ನೇ ಸ್ತಬ್ಧಗೊಳಿಸುವ (ಕಾರ್ಡಿಯಾಕ್ ಅರೆಸ್ಟ್) ಟೆಕಿಕಾರ್ಡಿಯ ಸೆಕೆಂಡಿನೊಳಗೆ ವ್ಯಕ್ತಿಯನ್ನು ಪ್ರಜ್ಞಾಹೀನಗೊಳಿಸಿ, ನಿಮಿಷದೊಳಗೆ ಸಾವನ್ನು ತರುವಷ್ಟು ಬಲಶಾಲಿ. ಹೃದಯದ ಕೆಳ ಕೋಣೆಗಳಲ್ಲಿ ಉದ್ಭವಿಸುವ ಸಮಸ್ಯೆ ಬಡಿತವನ್ನು ಜೋರು ಮಾಡಿಬಿಡುತ್ತದೆ. ಜೊತೆಗೆ ಉಸಿರಾಟಕ್ಕಾಗಿ ಪರದಾಟ, ಎದೆಯಲ್ಲಿ ಹಿಂಡಿದಂಥ ನೋವು, ಕಣ್ಣು ಕತ್ತಲೆ ಬರುವುದು, ತಲೆ ಸುತ್ತುವುದು, ಕಡೆಗೆ ಪ್ರಜ್ಞಾಹೀನರಾಗುವುದು.

ಹೀಗಾದಾಗ ತಕ್ಷಣ ವೈದ್ಯರತ್ತ ಧಾವಿಸಿದರೆ ವೈದ್ಯರಿಂದ ಇಸಿಜಿ, ಸೂಕ್ತ ಚಿಕಿತ್ಸೆಗಳಿವೆ.

ಆದರೆ ಪ್ರೇಮಿಸುವ ಹುಡುಗರು ಹೆದರಬೇಕಿಲ್ಲ. ನಿಮ್ಮ ಮನಸ್ಸಲ್ಲಿ ಪ್ರೀತಿ ಉಕ್ಕಿಸಿದ ಹುಡುಗಿಯ ಜತೆ ಮಾತನಾಡಬೇಕಾದಾಗ ಹಾಗೆ ಎದೆ ಬಡಿತ ಹೆಚ್ಚಾದರೆ ಅದು ಸಹಜವೇ. ಒಂದಿಷ್ಟು ರೋಮಾಂಚನ ಅನುಭವಿಸಿ ಮರೆತುಬಿಡಬಹುದು.

–ಸವಿ